# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್-ಡಿ ಹುದ್ದೆಗಳ ಮರುಪದನಾಮೀಕರಣದ ಬಗ್ಗೆ ಆದೇಶ.

**ಓದಲಾಗಿದೆ:** 1)ದಿನಾಂಕ:24-02-2015ರಂದು ನಡೆದ ವೃಂದ ಪರಿಶೀಲನಾ ಸಮಿತಿ ಸಭೆಯ ನಡವಳಿ
2)ದಿನಾಂಕ:09-04-2015ರಂದು ಸಕಾರದ ಜಂಟಿ ಕಾರ್ಯದರ್ಶಿ(ಆಡಳಿತ) ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ

****

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರ ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳ ಸಮಗ್ರ ಪರಿಷ್ಕರಣೆ ಕುರಿತಂತೆ ದಿನಾಂಕ:24-02-2015ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಜಮೇದಾರ್, ದಲಾಯತ್/ಪ್ಯೂನ್, ವಾಚ್‌ಮನ್,ಸ್ವೀಪರ್, ಸ್ಕ್ಯಾವೆಂಜರ್/ಬಾತ್‌ರೂಂ ಸ್ವೀಪರ್ ವೃಂದಗಳ ಪದನಾಮ ಹಳೆಯದಾಗಿದ್ದು ಇದನ್ನು ಹಿರಿಯ ಕಛೇರಿ ಪರಿಚಾರಕ(Senior Office Attender),ಕಛೇರಿ ಪರಿಚಾರಕ (Office Attender), ಹಾಗೂ ಕಛೇರಿ ಸ್ವಚ್ಛತಾಗಾರ ಸಿಬ್ಬಂದಿ (Housekeeping Staff) ಅಥವಾ ಇತರ ಯಾವುದೇ ಸೂಕ್ತ ಪದನಾಮಗಳನ್ನು ನೀಡುವ ಕುರಿತಂತೆ ಸದರಿ ವೃಂದಗಳ ನೌಕರರ ಸಂಘದೊಂದಿಗೆ ಚರ್ಚಿಸಿ ಈ ವೃಂದಗಳ ಪದನಾಮಗಳನ್ನು ಮರುಪದನಾಮೀಕರಿಸಲು ಅಗತ್ಯ ಕ್ರಮವಹಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದ್ದರು. ಅದರಂತೆ ದಿನಾಂಕ:09-04-2015ರಂದು ಸರ್ಕಾರದ ಜಂಟಿ ಕಾರ್ಯದರ್ಶಿ(ಆಡಳಿತ) ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ ಹಾಗೂ ಕರ್ನಾಟಕ ಸರ್ಕಾರ ಸಚಿವಾಲಯ ಗ್ರೂಪ್-ಡಿ ನೌಕರರ ಸಂಘದ ಪ್ರತಿನಿಧಿಗಳ ಸಭೆ ನಡೆಸಿದ್ದು ಜಮೇದಾರ್ ವೃಂದವನ್ನು ಹಿರಿಯ ಕಛೇರಿ ಪರಿಚಾರಕ(Senior Office Attender) ಎಂದು, ದಲಾಯತ್ ವೃಂದವನ್ನು ಕಛೇರಿ ಪರಿಚಾರಕ (Office Attender), ಹಾಗೂ ಸ್ವೀಪರ್, ಸ್ಕ್ಯಾವೆಂಜರ್/ಬಾತ್‌ರೂಂ ಸ್ವೀಪರ್ ವೃಂದವನ್ನು ಕಛೇರಿ ಸ್ವಚ್ಛತಾಗಾರ ಸಿಬ್ಬಂದಿ (Housekeeping Staff) ಎಂದೂ ಮರುಪದನಾಮೀಕರಿಸಲು ಹಾಗೂ ಕಾವಲುಗಾರ (Watchman) ವೃಂದವನ್ನು . ಕಾವಲುಗಾರ (Watchman) ಎಂದೇ ಉಳಿಸಿಕೊಂಡು ಮುಂದುವರೆಸಲು ಸರ್ವಾನುಮತದ ಸಹಮತಿಯ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಈ ಬಗ್ಗೆ ಒಂದು ಸರ್ಕಾರಿ ಆದೇಶವನ್ನು ಹೊರಡಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

--2

**ಸರ್ಕಾರದ ಆದೇಶ ಸಂ:ಸಿಆಸುಇ 235 ಸಿಸೇನಿ 2015, ಬೆಂಗಳೂರು ದಿನಾಂಕ:30.07.2015.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ 'ಜಮೇದಾರ್' ವೃಂದವನ್ನು 'ಕಛೇರಿ ಹಿರಿಯ ಪರಿಚಾರಕ(Senior Office Attender)' ಎಂದು, 'ದಲಾಯತ್' ವೃಂದವನ್ನು 'ಕಛೇರಿ ಪರಿಚಾರಕ (Office Attender)' ಎಂದು ಹಾಗೂ 'ಸ್ವೀಪರ್/ ಸ್ಕ್ಯಾವೆಂಜರ್/ಬಾತ್‌ರೂಂ ಸ್ವೀಪರ್' ವೃಂದವನ್ನು 'ಕಛೇರಿ ಸ್ವಚ್ಛತಾಗಾರ ಸಿಬ್ಬಂದಿ (Housekeeping Staff)' ಎಂದು ಮರುಪದನಾಮೀಕರಿಸಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆ.ಇ.385 ಸೇ-3/2015 ದಿನಾಂಕ: 01-07-2015ರನ್ವಯ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

C Hemalatha

(ಸಿ.ಹೇಮಲತ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ-3) ☎: 22032274

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ., ಇವರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಅಪರ ಕಾರ್ಯದರ್ಶಿ, ಸಿ.ಆ.ಸು.ಇ.(ಆಡಳಿತ), ಇವರ ಆಪ್ತ ಸಹಾಯಕರು
4. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ.(ಸೇವಾ ನಿಯಮಗಳು-2)
5. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ)/(ಲೆಕ್ಕಪತ್ರ)/(ಆಡಳಿತ-2)
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ.(ಸೇವೆಗಳು-1)
7. ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ.
8. ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ ಗ್ರೂಪ್-ಡಿ ನೌಕರರ ಸಂಘ.
9. ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂ: ಸಿಆಸುಇ 235 ಸಿಸೇನಿ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.09.2015

**ಸೇರ್ಪಡೆ ಆದೇಶ**

**ವಿಷಯ:** ಕರ್ನಾಟಕ ಸರ್ಕಾರ ಸಚಿವಾಲಯದ ಗ್ರೂಪ್-ಡಿ ಹುದ್ದೆಗಳ ಮರುಪದನಾಮೀಕರಣದ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 235 ಸಿಸೇನಿ 2015, ದಿನಾಂಕ: 30.07.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದ ಉಲ್ಲೇಖಿತ ಆದೇಶದ ಆದೇಶಭಾಗದ ಮೊದಲನೇ ಕಂಡಿಕೆಯ ನಂತರ ಈ ಕೆಳಗಿನ ಕಂಡಿಕೆಯನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

" ಈ ಆದೇಶದಂತೆ ಮರುಪದನಾಮೀಕರಣಗೊಳ್ಳುವ ಹೊಸ ಪದನಾಮಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿದಾಗ ಅಳವಡಿಸಿಕೊಳ್ಳತಕ್ಕದ್ದು"

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಸಿ.ಹೇಮಲತ)**
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ-3) ☎: 22032274

**ಇವರಿಗೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿ.ಆ.ಸು.ಇ., ಇವರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಅಪರ ಕಾರ್ಯದರ್ಶಿ, ಸಿ.ಆ.ಸು.ಇ.(ಆಡಳಿತ), ಇವರ ಆಪ್ತ ಸಹಾಯಕರು
4. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ.(ಸೇವಾ ನಿಯಮಗಳು-2)
5. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ)/(ಲೆಕ್ಕಪತ್ರ)/(ಆಡಳಿತ-2)

G.O.14

6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ.(ಸೇವೆಗಳು-1)
7. ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ.
8. ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ ಗ್ರೂಪ್-ಡಿ ನೌಕರರ ಸಂಘ.
9. ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.